# ಕಾಮನ್-ಬಿಲ್ಲು!

ಸುಳ್ಳೇ ಗೊರಕೇ ಸದ್ದು ಮಾಡ್ತಾ ಮಲಗಿದ್ದೆ, ಇವಳು ಪಾಪ ಗಾಢ ನಿದ್ರೇಲೀ ಇದೀನಿ ಅಂತ ಏಳಿಸದಿರಲಿ ಅಂತ, "ರೀ ಸುಮ್ನೇ ಏಳಿ ನಂಗೊತ್ತು ನೀವು ನಿದ್ರೇಲೀ ಗೊರಕೆ ಸದ್ದೆಲ್ಲ ಮಾಡಲ್ಲ, ನಾಟಕ ಸಾಕು" ಅಂತ ಇವಳು ಬಂದು ಅಲಾರ್ಮಿನಂತೆ ಗೊಣಗಿದಳು, ಅಲಾರ್ಮ್ ಸದ್ದು ಮಾಡಿದ್ರೆ ಏನ್ ಎದ್ದೇಳ್ತೀವಾ, ಬೆಳಗಾಯ್ತು ಅಂತ ಗೊತ್ತಾಗ್ತದೆ ಅಷ್ಟೇ, ನಾವೆದ್ದೇಳೋದು ನಮಗಿಷ್ಟ ಬಂದಾಗಲೇ, ಅಂತನಕೊಂಡು ಇನ್ನು ಜೋರು ಸದ್ದು ಮಾಡುತ್ತ ಮಲಗಿದೆ, "ಇದು ಜಾಸ್ತಿ ಆಯ್ತು" ಅಂತ ಮತ್ತೊಂದು ವಾರ್ನಿಂಗ್ ಕೊಟ್ಟಳು, ಅಲ್ಲೇ ಮಲಗಿದಲ್ಲಿಂದಲೇ "ಒಮ್ಮೊಮ್ಮೇ ಸುಸ್ತಾಗಿ ಮಲಗಿದಾಗ ಗೊರಕೆ ಸದ್ದು ಎಲ್ರೂ ಮಾಡ್ತಾರೆ" ಅಂತ ಉತ್ತರಿಸಿದೆ. "ಓಹೋ, ನಿದ್ರೇಲೀ ಉತ್ತರ ಕೂಡಾ ಕೊಡ್ತಾರೆ ಅಲ್ವಾ" ಅಂತ ಅಲ್ಲಿಗೇ ಬಂದು ತಡವಿದಳು. ಇನ್ನೂ ಎದ್ದೇಳದಿದ್ದಾಗ "ಈಗ ಎದ್ದರೆ ಸರಿ ಇಲ್ಲಾಂದ್ರೆ ಪೇಂಟ್ ತಂದು ಸುರೀತೀನಿ" ಅಂದ್ಲು. ಇದೇನಿದು ಹೊಸದು ನೀರು ಸುರಿಯೋ ಬದಲು ಪೇಂಟ್ ಅಂತೀದಾಳೆ ಅಂತ ಅನುಮಾನ ಬೇಡ, ಅಂದು ಮನೆ ಪೇಂಟ್ ಮಾಡಿಸೋರು ಇದೀವಿ ಅಂತ ಆಗಲೇ ನನಗೂ ನೆನಪಾಗಿದ್ದು. ತಡಬಡಿಸಿ ಎದ್ದೆ, "ಪೇಂಟರ್ ಬಂದಿದೀದಾನಾ" ಅನ್ನುತ್ತ. "ಇನ್ನೂ ಇಲ್ಲ, ಪೇಂಟ ತಂದಿಡಿ ಬರ್ತಾನೆ" ಅಂದ್ಲು. "ಯಾವ ಬಣ್ಣ ಇನ್ನೂ ನಿರ್ಧರಿಸೇ ಇಲ್ಲ" ಅಂದ್ರೆ. "ಒಂದು ನಾಲ್ಕೈದು ಬಣ್ಣ ಸ್ವಲ್ಪ ಸ್ವಲ್ಪ ತಂದಿಡಿ, ನೊಡೋಣ" ಅಂತ ಹೇಳಿದಳು, "ಇದೇನು ಮನೇನಾ ಕಾಮನಬಿಲ್ಲಿನಾ, ಮನೆಗೆ ಪೇಂಟ ಮಾಡ್ತಾ ಇರೋದು ಕಣೇ, ಕಾಮನಬಿಲ್ಲು ಬಿಡಿಸ್ತಾ ಇಲ್ಲ, ಬಿಲ್ಲು ಎಷ್ಟಾಗುತ್ತೊ ಏನೊ" ಅಂತ ಕಣ್ಣುಜ್ಜುತ್ತ ಹೊರಬಂದೆ.

ಈರುಳ್ಳಿ ಮೆನಸಿನಕಾಯಿ ಹೆಚ್ಚುತ್ತ ಕುಳಿತಿದ್ದವಳು "ಇದೋ ಈ ಮೆಣಸಿನಕಾಯಿ ಇದೆಯಲ್ಲ, ಈ ಬಣ್ಣ ಇಲ್ಲಿ ಸರಿಯಾಗಿರತ್ತೇ" ಅಂತ ಗೊಡೆಯೊಂದನ್ನು ತೋರಿಸಿದಳು. "ಹೂಂ ಮತ್ತೆ ಅಲ್ಲಿ, ಯಾವುದು, ಸೌತೇಕಾಯಿ, ಗಜ್ಜರಿ ತಂದು ಕೊಡಲಾ ಬಣ್ಣ ಹೇಳಲು" ಅಂದ್ರೆ. "ರೀ ಗಜ್ಜರಿ ಬಣ್ಣ ಅಲ್ಲಿ ಸೂಪರ್" ಅಂತಂದಳು. "ಸರಿ ಬಿಡು ಬಣ್ಣ ತರುವ ಮೊದಲು ತರಕಾರಿ ಮಾರ್ಕೆಟಗೇ ಹೋಗಬೇಕು ಅಂತಾಯ್ತು, ಪೇಂಟ ಅಂಗಡೀಲಿ ತರಕಾರಿ ಹಿಡಿದು ನಿಲ್ಬೇಕು ಅಷ್ಟೇ" ಅಂತ ಬಯ್ದರೂ, ಮತ್ತೆ "ಈ ಕೆನೆ ಬಣ್ಣ ಬೆಡರೂಮಿಗೆ" ಅಂತ ಹಾಲಿನ ಪಾತ್ರೆ ತೋರಿಸಿದಳು. "ಸರಿ ಮೊದಲು ಹಾಲು ತರ್ತೀನಿ ಹಾಗಾದ್ರೆ, ಹಾಲಿನಂಗಡಿ ಹಾಸಿನಿ ನೋಡಿ ಬಹಳ ದಿನ ಬೇರೆ ಆಯ್ತು" ಅಂತ ನಡೆದರೆ, ದುರುಗುಟ್ಟಿಕೊಂಡು ನೋಡಿದಳು.

ಟೀ ಹೀರುತ್ತ ಕೂತವರ ಮಾತು ಮತ್ತೆ ಬಣ್ಣದೆಡೆಗೆ ಮರಳಿತು, "ಮನೆಯೆಲ್ಲ ಕ್ರೀಮ, ಕೆನೆ ಬಣ್ಣ ಮಾಡಿಸೋಣ ಬೆಳಕು ಚೆನ್ನಾಗಿರ್ತದೆ" ಅಂತ ನಾನಂದೆ, **"ಮನೆ ಪೂರಾ ಒಂದೇ ಬಣ್ಣ ಮಾಡಿಸೋಕೇ ಇದೇನು ವೈಟಹೌಸಾ"** ಅಂತ ತಿರುಗಿಬಿದ್ಲು. ಇವಳಂತೂ ಕಾಮನಬಿಲ್ಲು ಮಾಡೊ ಯೋಚನೆಯಲ್ಲೆ ಇದ್ದಂತಿತ್ತು, "ಅದೂ ಒಳ್ಳೆ ಐಡಿಯಾನೇ, ಮನೆಯೆಲ್ಲ ಬಿಳಿ ಬಣ್ಣ ಪೇಂಟ್ ಮಾಡಿಸಿ, ಯಾವ ರೂಮಲ್ಲಿ ಯಾವ ಬಣ್ಣ ಬೇಕೊ ಆ ಬಣ್ಣದ ಲೈಟು ಹಾಕಿದ್ರೆ, ಹಾಲ್ ಒಂದಿನಾ ಹಸಿರು, ಮತ್ತೊಂದಿನಾ ಕೆಂಪು" ಅಂತಿದ್ದರೆ, "ಇನ್ನೊಂದು ದಿನಾ ಕೇಸರಿ... ಸರಿಯಾಗಿರ್ತದೆ, ಮನೇನಾ ಟ್ರಾಫಿಕ ಸಿಗ್ನಲ್ಲಾ, ಕರೆಂಟು ಬಿಲ್ಲು ಯಾರು ಕಟ್ಟೊದು" ಅಂತ ಸಿಡುಕಿದಳು. "ನಿಂಗೆ ಯಾವ ಬಣ್ಣ ಬೇಕೊ ಅದೇ ಮಾಡಿಸ್ಕೊ ಹೋಗು, ದಿನದ ಹನ್ನೆರಡು ಘಂಟೆ ಆಫೀಸಲ್ಲೇ ಇರ್ತೀನಿ, ಮನೆ ಬಣ್ಣ ಯಾವುದಿದ್ರೆ ಏನಂತೆ" ಅಂತ ಕೈಚೆಲ್ಲಿದೆ. ಪಕ್ಕದಲ್ಲಿ ಬಂದು ಆತುಕೊಂಡು ಕೂತು ಬಣ್ಣ ಬಿಟ್ಟು ಬೆಣ್ಣೆ ಹಚ್ಚತೊಡಗಿದಳು "ಬೇಜಾರಾಯ್ತಾ" ಅಂತ. "ನನಗ್ಯಾಕೆ ಬೇಜಾರು ನಿನ್ಗೆ ಹೇಗೆ ಬೇಕೋ ಹಾಗೆ ಬಣ್ಣ ಮಾಡಿಸು, ಬಣ್ಣದಲ್ಲಿ ಹೆಣ್ಮಕ್ಕಳಿಗೇ ಜಾಸ್ತಿ ತಿಳಿಯೋದು" ಅಂದೆ. "ಏಳು ಬಣ್ಣ ಸೇರಿನೇ ಬಿಳಿ ಬಣ್ಣ ಆಗೋದು ಅನ್ನೊ ಹಾಗೆ ಇಬ್ರೂ ಸೇರಿನೇ ನಿರ್ಧರಿಸೋದು" ಅಂದ್ಲು, "ಅದೇ ಬಿಳಿ ಬಣ್ಣ ಮಾಡಿಸಿ, ಅದರಲ್ಲಿ ನಿನ್ನಿಷ್ಟದ ಬಣ್ಣ ನನ್ನಿಷ್ಟದ ಬಣ್ಣ ಎಲ್ಲ ಇದೇ ಅನ್ಕೊಂಡರೆ" ಅಂದೆ, "ರೀ ಈಗೇನು ಬಿಳಿ ತಾನೆ ಅದೇ ಮಾಡಿಸಿ, ಆಮೇಲೆ ಧೂಳು ಕೂತು ಕಲೆಯಾದರೆ ನನ್ನ ಕೇಳ್ಬೇಡಿ" ಅಂತ ಈಗಲೇ ಎಚ್ಚರಿಸಿದಳು. ಅದೂ ನಿಜವೆನಿಸಿತು, ಅಲ್ದೆ ಇದೇನು ವೈಟಹೌಸೂ ಅಲ್ಲ ಆ ಬಣ್ಣ ಮಾಡಿಸೊಕೆ ಅಂತ.

"ಪಿಂಕ ಹೇಗಿರ್ತದೆ" ಅಂದೆ ಹುಡುಗಿಯರಿಗೆ ಅದು ಇಷ್ಟ ಆಗಬಹುದು ಅಂತ. "ಪಿಂಕ ಚಡ್ಡಿ, ಪಿಂಕ ಸ್ಲಿಪ್, ಪಿಂಕಿ ಫಿಂಗರ್ರು ಅಂತೆಲ್ಲ ಕೇಳಿ ಕೇಳಿ ಸಾಕಾಗಿಲ್ವಾ, ಮನೇನೂ ಅದೇ ಬಣ್ಣ ಬೇಕಾ" ಅಂತ ತಿರುಗಿಬಿದ್ಲು, "ನಂಗೂ ಇಷ್ಟ ಇರಲಿಲ್ಲ ಬಿಡು, ನಿನ್ಗೆ ಇಷ್ಟ ಏನೊ ಅಂತ ಕೇಳಿದೆ" ಅಂದೆ. "ನನ್ನಿಷ್ಟ ಎಲ್ಲ ಬೇಡ ನಿಮ್ಮಿಷ್ಟ ಹೇಳಿ" ಅಂತ ಕೇಳಿದ್ದಕ್ಕೆ "ಸುತ್ತಲೂ ತಿಳಿ ಹಸಿರು ಗಾರ್ಡನ್ನಿನಂತೆ ವಾಲ ಪೇಂಟಿಂಗ್, ಅದೊ ಆ ಗೋಡೆಯಲ್ಲಿ ನೀರಿಗೆ ಹೊರಟು ನಿಂತು ತಿರುಗಿ ನೋಡುತ್ತಿರುವಂತ ಹುಡುಗಿ, ಅಲ್ಲಿ ಪಕ್ಕದಲ್ಲಿ ಹುಲ್ಲು ಮೇಯುತ್ತಿರುವ ಹಸು, ಇಲ್ಲಿ ನೀರ ಝರಿ, ಆ ಪಿಲ್ಲರ ಸುತ್ತ ಹರಡಿರುವ ಬಳ್ಳಿ ಅಲ್ಲಲ್ಲಿ ಬಿಳಿ ಬಿಳಿ ಹೂವು, ಮೇಲೆ ತಿಳಿ ನೀಲಿ ಆಕಾಶ, ಮೋಡಗಳು, ಕತ್ತಲಾದರೆ ಈ ಬೆಡ್ ಮೇಲೆ ಮಲಗಿ ಮೇಲೆ ನೋಡುತ್ತಿದ್ದರೆ ಅಲ್ಲಲ್ಲಿ ಮಿನುಗುವ ನಕ್ಷತ್ರದಂತ ಚಿಕ್ಕ ಚಿಕ್ಕ ಎಲ್.ಈ.ಡೀ ಲೈಟುಗಳು. ಪಕ್ಕದಲ್ಲಿ ಚಂದ್ರನಂತೆ ನೀನು" ಅಂದೆ. ಕನಸುಗಣ್ಣುಗಳನ್ನು ತೆರೆದು ನೋಡುತ್ತಲೇ ಇದ್ಲು, ಅಲುಗಿಸಿದೆ ಮತ್ತೆ ಕಲ್ಪನೆಯಿಂದ ಹೊರಬಂದಳು, ಮತ್ತೆ ಹೇಳಿದೆ "ಇದು ನನ್ನಿಷ್ಟ, ಆದರೆ ಈ ರೀತಿ ಬಣ್ಣ ಮಾಡಿಸಿದರೆ ಬರುವ ಬಿಲ್ಲು ಎದೆಗೇ

ನಾಟುತ್ತದೆ ಬಾಣದಂತೆ, ಅಲ್ಲದೇ ಬಾಡಿಗೆ ಮನೆ ಬೇರೆ, ಸ್ವಂತದ್ದಾದರೆ ನಮ್ಮಿಷ್ಟ ಏನು ಮಾಡಿದರೂ ಓಕೇ" ಅಂದೆ. "ಐಡಿಯಾ ಎನೋ ಬಹಳೇ ಚೆನ್ನಾಗಿದೆ, ಆದ್ರೆ ಕಾಸ್ಟ್ಲಿ" ಅಂತ ಸುಮ್ಮನಾದಳು.

ಅಷ್ಟರಲ್ಲಿ ಮನೆ ಮಾಲೀಕರು ಬಂದರು, ಈಗಿರುವ ಬಣ್ಣವೇ ಮಾಡಿಸಿ ಅಂತಂದರು, ನಮ್ಮ ಬದಲಾವಣೆ ಯೋಜನೆಗಳನ್ನು ಹೇಳಬೇಕೆನಿಸಿದರೂ ಮನೆ ಅವರದಲ್ಲವೇ ಅಂತ ಸುಮ್ಮನಾದೆವು, ಹಾಗೂ ಹೀಗೂ ಇವಳು ತಿಳಿನೀಲಿ ಬಣ್ಣ ಎಲ್ಲ ಕಡೆ ಒಂದೇ ರೀತಿ ಆಗುತ್ತದೆ ಅಂತ ಹೇಳಿ ಒಪ್ಪಿಸಿದಳು, ಹಾಲ್‌ನಲ್ಲಿನ ತಿಳಿ ಹಸಿರು ಬಣ್ಣಕ್ಕೆ ವಿದಾಯ ಹೇಳಿಯಾಯ್ತು. ಪೇಂಟರ್ ಬೇರೆ ಒಂದೇ ಬಣ್ಣವಾದರೆ ಅವನಿಗೂ ಅನುಕೂಲ ಅಂದ, ಅಲ್ಲದೇ ಉಳಿತಾಯ ಕೂಡ ಆಗುತ್ತದೆ ಅಂದದ್ದು ಕೇಳಿ ಖುಷಿಯಯ್ತು. ಇನ್ನೇನು ಹೊರಡಬೇಕೆನ್ನುವಲ್ಲಿ "ಬಾರ್ಡರಗೆ ಯಾವ ಬಣ್ಣ" ಅಂತ ಕೇಳಿದಳು. ನಾನು "ಇದೇನು ಸೀರೆನಾ, ಬಾರ್ಡರ ಬಣ್ಣ ಬೇರೆ ಮಾಡಿ ಗೊಂಡೆ ಕಟ್ಟೊದಕ್ಕೆ" ಅಂದೆ, ಅಷ್ಟರಲ್ಲಿ ಪೇಂಟರ್ "ಸರ್ ಸೀಲಿಂಗ ಬಾರ್ಡರ್ ಕಲರು ಬೇರೆ ಇರ್ತದೆ" ಅಂದ. ಗೊತ್ತಿಲ್ಲದೇ ಏನೊ ಹೇಳಹೋದ ನನ್ನ ಪೆಚ್ಚು ಮೋರೆ ನೋಡಿ ನಕ್ಕಳು "ಅದು ಮೇಡಮ್ ಇಷ್ಟ" ಅಂತ ಸಂಭಾಳಿಸಿದೆ.

ಅಂತೂ ಇಂತೂ ಮುಂಜಾನೆಯಿಂದ ಸಂಜೇವರೆಗೆ ಪೇಂಟರ ಹಿಂದೆ ಸುತ್ತಿ, ಅಲ್ಲಿ ಕೆತ್ತು, ಇಲ್ಲಿ ಮೆತ್ತು ಅಂತ ಏನೇನೊ ಹೇಳಿ ಪೇಂಟ್ ಮಾಡಿಸಿದಳು, ಸಂಜೇ ಹೊತ್ತಿಗೆ, ಅವಳ ಮುಖದಲ್ಲೂ ಬಣ್ಣ ಮೆತ್ತಿತ್ತು, "ಬಾರೆ ಇಲ್ಲಿ ಮೀಸೆ ಕೊರೆಯುತ್ತೀನಿ" ಅಂತ ಅಂದವನಿಗೆ ಗಲ್ಲದ ಮೇಲೆ ಅವಳು ಕೊರೆದ ಎರಡು ಗೆರೆಗಳೊಂದಿಗೆ ಥೇಟ್ ಆದಿವಾಸಿಗಳಂತೆ ಕಾಣುತ್ತಿದ್ದೆ, ನಾ ಕೊರೆದ ಮೀಸೆ ತಿರುವಿಕೊಂಡು, ನನ್ನ ಅವಳು ಹೆದರಿಸುತ್ತಿದ್ದುದು ನೋಡಿ ಪೇಂಟರ ಕೂಡ ನಗುತ್ತಿದ್ದ.

**ಎನೇನೊ ಬಣ್ಣ ಬಣ್ಣದ ಕನಸುಗಳನ್ನು ಕಾಣುತ್ತೇವೆ, ಬದುಕೇ ಬಣ್ಣ ತುಂಬಿ ಕಾಮನಬಿಲ್ಲು ಆಗಲಿ ಅನ್ನುತ್ತೇವೆ**, ಆದರೆ ಅದೇ ಕಾಮನ್ ಮ್ಯಾನ, ಶ್ರೀಸಾಮಾನ್ಯನ ಪ್ರಾಬ್ಲಂ ಅಂತ ಬಿಲ್ಲು ಧುತ್ತೆಂದು ಮುಂದೆ ಬಂದು ನಿಂತಾಗ ಕನಸುಗಳ ಬಣ್ಣ ಬಿಳಚಿಕೊಂಡುಬಿಡುತ್ತದೆ. ಒಬ್ಬರಿಗೆ ಹಸಿರು ಇಷ್ಟವಾರದೆ, ಇನ್ನೊಬ್ಬರಿಗೆ ಕೆಂಪು, ಮತ್ತೊಬ್ಬರಿಗೆ ನೀಲಿ... ಎಲ್ಲವನ್ನೂ ಸೇರಿಸಿದರೆ ಬಿಳಿ ಅಂತ ಹೀಗೆ ಬದುಕು ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಲಿಸುತ್ತದೆ. ಹಾಗಂತ ಕನಸು ಕಾಣಲೇಬಾರದೆಂದಿಲ್ಲ, ಕಾಣಬೇಕು ಕನಸು ನನಸಾಗಿಸಲು ಶ್ರಮಿಸಬೇಕು, ನನಸಾಗದಿದ್ದರೆ ನಸುನಗುತ್ತ ಬಂದದ್ದನ್ನು ಸ್ವೀಕರಿಸಲೂ ಸಿದ್ಧರಾಗಿರಬೇಕು.

ನಮ್ಮಿಬ್ಬರ ಕಾಮನ್ ಇಷ್ಟವಾದ ತಿಳಿನೀಲಿ ಬಣ್ಣ ಮನೆ ತುಂಬ ಬಳಿದಾಗಿತ್ತು, ಬಿಲ್ಲು ಕೂಡ ಕಮ್ಮಿಯಾಗಿತ್ತು, ಒಂಥರಾ ಕಾಮನಬಿಲ್ಲೇ ಆಗಿತ್ತು. ಎಲ್ಲ ತೊಳೆದು ಮತ್ತೆ ಸಾಮಾನೆಲ್ಲ ಜೋಡಿಸಿ ಪೇರಿಸಿಟ್ಟು ಸುಸ್ತಾಗಿತ್ತು. ಬೆಡ್ ಮೇಲೆ ಮಲಗಿಕೊಂಡು ಪಕ್ಕದಲ್ಲಿದ್ದವಳಿಗೆ ಕೇಳಿದೆ "ಇಷ್ಟ ಆಯ್ತಾ ಬಣ್ಣ" ಅಂತ. "ನಿಮ್ಮ ಕನಸಿನ ಬಣ್ಣದಷ್ಟೇನೂ ಅಲ್ಲ, ಆದ್ರೆ ನಮ್ಮಿಬ್ಬರ ಇಷ್ಟದ ತಿಳಿನೀಲಿ ಆದರೂ ಇದೆ ಅಂತ ಸಮಾಧಾನ ಆಯ್ತು, ರೀ ಒಂದು ಕೆಲ್ಸ ಮಾಡೊಣ ಈ ಮೇಲಿನ ಸ್ಲ್ಯಾಬ ಕಿತ್ತು ತೆಗೆಸಿದ್ರೆ ಮೇಲೆ ಆಕಾಶ ನಕ್ಷತ್ರ ಎಲ್ಲ ಕಾಣಿಸ್ತದೆ" ಅಂದ್ಲು. "ಮಳೆ ಆದ್ರೆ ಮನೆಯಲ್ಲ ನೀರು ಸುರಿದು ಇಲ್ಲಿ ನೀರ ಝುರಿ ಕೂಡ ಹರಿಯುತ್ತದೆ, ಹಾಗೆ ಹೊರಗೆ ಕಾಮನಬಿಲ್ಲೂ ಕಾಣ್ತದೆ" ಅಂದೆ, "ಅಲ್ಲಿ ನೀರಿಗಾಗಿ ಹೊರಟ ಹುಡುಗಿಯಂತೆ ಬಿಂದಿಗೆ ಹಿಡಿದುಕೊಂಡು ತಿರುಗಿ ನೋಡುತ್ತ ಬೇಕಾದ್ರೆ ನಾನು ನಿಲ್ತೀನಿ, ಹಸು ಒಂದು ತಂದರಾಯ್ತು ನೋಡಿ" ಅಂದ್ಲು. "ಬಕೆಟ್ಟು ತೆಗೆದುಕೊಂಡು ಝುರಿಯ ನೀರು ಹೊರಹಾಕುತ್ತ ನಾ ನಿಲ್ಲಬಹುದುಲ್ಲ" ಅಂದೆ ನಕ್ಕಳು, "ನಮ್ಮನೆ ಅಂತ ಆದರೆ ಹಾಗೇ ಬಣ್ಣ ಮಾಡಿಸೋಣ, ಸಧ್ಯಕ್ಕೆ ನಮ್ಮಿಬ್ಬರ ಇಷ್ಟದ ಒಂದು ಬಣ್ಣವಾದರೂ ಇದೆಯಲ್ಲ" ಅಂತಂದೆ, "ನಮ್ಮನೆ ಆದರೆ ಕಾಮನಬಿಲ್ಲು ಮಾಡೊಣ" ಅಂತಿದ್ದಳು, ಹಾಗೇ ಕನಸುಗಳೊಂದಿಗೆ ನಿದ್ರೆಗೆ ಜಾರಿದೆವು, ಮತ್ತೆ ಹೀಗೆ ಬದುಕಿನ ಬಣ್ಣ ಬಣ್ಣದ ಕನಸುಗಳೊಂದಿಗೆ ಮತ್ತೆ ಸಿಗುತ್ತೇನೆ.

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...